

بسم اللہِ الرّحمٰن الرّحیم

# ಬದ್ರ್ ಯುದ್ಧ – ಯುದ್ಧ ಪೂರ್ವ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **16–06–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮಕ್ಕಾದ ಸತ್ಯನಿಷೇಧಿಗಳ ಯುದ್ಧದ ತಯಾರಿಯ ಕೆಲವು ಸ್ಥಿತಿಗಳನ್ನು ಪ್ರಸ್ತಾಪಿಸಲಾಗಿತ್ತು. ಇದರ ಕುರಿತು ಹೆಚ್ಚಿನ ವಿವರಣೆ ಹೀಗಿದೆ: ಉಮಯ್ಯ ಬಿನ್ ಖಲ್ಫ್ ಮತ್ತು ಅಬೂಲಹಬ್ ಯುದ್ಧದಲ್ಲಿ ಭಾಗವಹಿಸುವುದರಿಂದ ಹಿಂದೆ ಸರಿಯಲು ಬಯಸಿದರು. ಅಬೂಜಹಲ್ ಉಮಯ್ಯ ಬಿನ್ ಖಲ್ಫಿನ ಬಳಿಗೆ ಬಂದು ಹೀಗೆ ಹೇಳಿದನು: ನೀವು ಖುರೈಶಿನ ಸರದಾರರರಲ್ಲಿ ಒಬ್ಬರಾಗಿರುವಿರಿ. ನೀವು ಯುದ್ಧದಲ್ಲಿ ಪಾಲ್ಗೊಳ್ಳದಿದ್ದರೆ ಜನರು ಕೂಡ ಹಿಂದೆ ಸರಿಯುವರು. ಆದ್ದರಿಂದ ನೀವು ನಮ್ಮೊಂದಿಗೆ ಖಂಡಿತ ಬರಬೇಕು. ಒಂದೆರಡು ದಿನಗಳ ಯಾತ್ರೆಯ ದೂರವನ್ನು ಕ್ರಮಿಸಿದ ನಂತರ ಬೇಕಾದರೆ ಮರಳಿ ಬನ್ನಿರಿ.

ಸತ್ಯದಲ್ಲಿ ಉಮಯ್ಯ ಯುದ್ಧಕ್ಕೆ ಹೋಗುವುದನ್ನು ಭಯಪಡಲು ಕಾರಣವೇನೆಂದರೆ, ಹಝ್ರತ್ ಪೈಗಂಬರ್[(ಸ)] ಉಮಯ್ಯನ ನಾಶದ ಬಗ್ಗೆ ಭವಿಷ್ಯವಾಣಿ ನುಡಿದಿದ್ದರು. ಅದರ ವಿವರಣೆ ಸಹೀಹ್ ಬುಖಾರಿಯಲ್ಲಿದೆ.

ಅಬೂಲಹಬ್ ತನಗೆ ಬದಲಿಯಾಗಿ ಬೇರೊಬ್ಬ ವ್ಯಕ್ತಿಯನ್ನು ಕಳುಹಿಸಿದ್ದನು. ಅವನು ಹೋಗದಿರಲು ಕಾರಣ ಆತಿಕ ಬಿನ್ತ್ ಅಬ್ದುಲ್ ಮುತ್ತಲಿಬ್‌ರ ಒಂದು ಸ್ವಪ್ನವಾಗಿತ್ತು. ಆತಿಕಳ ಕನಸು ಕೈಯಲ್ಲಿ ನೀಡಲಾದ ವಸ್ತುವಂತೆ ಆಗಿದೆ ಎಂದು ಅಬೂಲಹಬ್ ಹೇಳುತ್ತಿದ್ದನು. ಎಂದರೆ ಖಂಡಿತ ಈಡೇರುವಂತಹದ್ದು ಎಂದು.

ಮಕ್ಕಾದ ಸತ್ಯನಿಷೇಧಿಗಳ ಸೈನ್ಯ ಬಹಳ ಉತ್ಸಾಹ ಮತ್ತು ಆವೇಶದೊಂದಿಗೆ ಹೊರಟಿತು. ಸೈನ್ಯದಲ್ಲಿ ಒಂದು ಸಾವಿರ ಸೈನಿಕರಿದ್ದರು. ಅವರ ಬಳಿ ನೂರು ಅಥವಾ ಇನ್ನೂರು ಕುದುರೆಗಳು, ಏಳುನೂರು ಒಂಟೆಗಳು, ಆರುನೂರು ಯುದ್ಧ ಕವಚಗಳು (ಯುದ್ಧದಲ್ಲಿ ಧರಿಸುವ ಉಡುಪುಗಳು) ಮತ್ತು ಇತರ ಯುದ್ಧ ಸಾಮಾನುಗಳಾದ ಈಟಿಗಳು, ಖಡ್ಗಗಳು ಮತ್ತು ಬಿಲ್ಲು ಬಾಣಗಳು ಬಹಳಷ್ಟು ಇದ್ದುವು.

ಖುರೈಶಿಗಳು ಮಕ್ಕದಿಂದ ಹೊರಟು ಮದೀನದಿಂದ 82 ಮೈಲುಗಳ ದೂರದಲ್ಲಿರುವ ಜುಹ್‌ಫಗೆ ತಲುಪಿದರು. ಅಲ್ಲಿ ಜುಹೈಮ್ ಬಿನ್ ಸಲತ್ ಎಂಬ ಓರ್ವ ವ್ಯಕ್ತಿ ಜನರಿಗೆ ತನ್ನೊಂದು ಕನಸನ್ನು ತಿಳಿಸಿದನು. ಅದರಲ್ಲಿ ಆತನು ನೋಡಿದ ದೃಶ್ಯವೇನೆಂದರೆ, ಒಬ್ಬ ವ್ಯಕ್ತಿ ಕುದುರೆಯಲ್ಲಿ ಸವಾರನಾಗಿ ಬಂದನು. ಆತನ ಬಳಿ ಒಂದು ಒಂಟೆ ಕೂಡ ಇತ್ತು. ಆತನು ಹೇಳಿದನು: ಉತ್ಬ ಬಿನ್ ರಬೀಅ, ಶೈಬ ಬಿನ್ ರಬೀಅ, ಅಬುಲ್‌ಹಕಂ ಬಿನ್ ಹಿಶಾಂ ಎಂದರೆ ಅಬೂಜಹಲ್, ಉಮಯ್ಯ ಬಿನ್ ಖಲ್ಫ್ ಮತ್ತು ಬೇರೆ ಕೆಲವು ಖುರೈಶಿ ಸರದಾರರು ವಧಿಸಲ್ಪಟ್ಟರು. ಅನಂತರ ಆತ ತನ್ನ ಒಂಟೆಯ ಕುತ್ತಿಗೆಯನ್ನು ಈಟಿಯಿಂದ ತಿವಿದು ಆ ಈಟಿಯನ್ನು ನಮ್ಮ ಡೇರೆಗಳ ಕಡೆಗೆ ತೂರಿದನು. ಹೀಗೆ ಆ ಒಂಟೆಯ ರಕ್ತ ನಮ್ಮ ಸೈನ್ಯದ ಪ್ರತಿಯೊಂದು ಡೇರೆಗೆ ತಗುಲಿತು. ಈ ಕನಸನ್ನು ಅಬೂಜಹಲ್ ಆಲಿಸಿದಾಗ, ಕೋಪದಿಂದ ಅಪಹಾಸ್ಯ ಮಾಡುತ್ತಾ ಹೀಗೆ ಹೇಳಿದನು: ಬನೂ ಅಬ್ದುಲ್ ಮುತ್ತಲಿಬ್‌ನಲ್ಲಿ ಮತ್ತೊಬ್ಬ ಪ್ರವಾದಿ ಆಗಮಿಸಿರುವನು. ಯಾರು ವಧಿಸಲ್ಪಡುವರು ಎಂದು ನಾಳೆ ನಾವು ಯುದ್ಧ ಮಾಡಿದರೆ ಗೊತ್ತಾಗುವುದು.

ಯುದ್ಧದಿಂದ ಬಿಟ್ಟುನಿಲ್ಲಲು ಪ್ರಯತ್ನಿಸಿರಿ ಎಂದು ಅಬೂಸುಫ್‌ಯಾನ್ ಸಹ ಅಬೂಜಹಲನಿಗೆ ಸಂದೇಶ ಕಳುಹಿಸಿದ್ದರು. ಅಬೂಸುಫ್‌ಯಾನನ ಈ ಸಂದೇಶವನ್ನು ಕೇಳಿ ಅಬೂಜಹಲ್ ಹೇಳಿದನು: ದೇವನಾಣೆ, ನಾವು ಬದ್ರ್ ಮೈದಾನದ ತನಕ ಖಂಡಿತ ಹೋಗುವೆವು. ಅಲ್ಲಿ ನಮ್ಮ ಒಂಟೆಗಳನ್ನು ಕೊಯ್ಯುವೆವು, ಮದ್ಯಪಾನ ಮಾಡುವೆವು, ನಮ್ಮ ದಾಸಿಯರು ನಮ್ಮ ಮುಂದೆ ಗೀತೆ ಹಾಡುವರು. ಹೀಗೆ ಪೂರ್ತಿ ಅರೇಬಿಯದಲ್ಲಿ ನಮ್ಮ ಯಾತ್ರೆ ಮತ್ತು ಸೈನ್ಯದ ವಾರ್ತೆ ತಲುಪುವುದು ಮತ್ತು ಅವರು ಯಾವಾಗಲೂ ನಮ್ಮನ್ನು ಭಯಪಡುವರು.

ಅಬೂಸುಫ್‌ಯಾನಿನ ಸಂದೇಶವನ್ನು ಆಲಿಸಿದಾಗ ಬನೂ ಅದ್ದಿ ಮತ್ತು ಬನೂ ಝೊಹ್‌ರ ಗೋತ್ರಗಳು ಯುದ್ಧದಲ್ಲಿ ಭಾಗಿಯಾಗದೇ ಮರಳಿ ಹೋದುವು. ಅಬೂತಾಲಿಬ್‌ರ ಪುತ್ರನಾದ ತಾಲಿಬ್ ಸತ್ಯನಿಷೇಧಿಗಳ ಜೊತೆಗಿದ್ದನು. ಮಾರ್ಗದಲ್ಲಿ ಸತ್ಯನಿಷೇಧಿಗಳು ಅವನೊಡನೆ ಹೀಗೆ ಹೇಳಿದರು: ಅಂತೂ ನೀವು ನಮ್ಮ ಜೊತೆಗೆ ಬಂದಿದ್ದೀರಿ, ಆದರೆ ನಿಮಗೆ ನಿಜವಾದ ಸಹಾನುಭೂತಿ ಮುಹಮ್ಮದ್[(ಸ)]ರೊಂದಿಗೆ ಇದೆ ಎಂದು ನಮಗೆ ಗೊತ್ತಿದೆ. ಇದನ್ನು ಕೇಳಿದಾಗ, ತಾಲಿಬ್ ತನ್ನ ಅನೇಕ ಸಂಗಡಿಗರ ಜೊತೆಗೆ ಮರಳಿ ಹೋದರು. ತಬರಿಯಲ್ಲಿ ಇರುವ ಒಂದು ಉಲ್ಲೇಖದಲ್ಲಿ ಹೀಗೆಯೂ ಪ್ರಸ್ತಾಪಿಸಲಾಗಿದೆ: ತಾಲಿಬ್ ಒತ್ತಾಯದ ಕಾರಣದಿಂದ ಮಕ್ಕಾದ ಸತ್ಯನಿಷೇಧಿಗಳ ಜೊತೆಗೆ ಹೊರಟಿದ್ದರು. ಆದರೆ ಅವರ ಪ್ರಸ್ತಾಪ

ವಧಿಸಲ್ಪಟ್ಟವರಲ್ಲಿ ಅಥವಾ ಕೈದಿಗಳಲ್ಲಿ ಲಭಿಸುತ್ತಿಲ್ಲ. ಅವರು ಮರಳಿ ಮನೆಗೂ ಹೋಗಿರಲಿಲ್ಲ.

ಹಝ್ರತ್ ಪೈಗಂಬರ್(ಸ) ಹಿಜರೀ 2, ರಮಝಾನ್ 12ರಂದು ಮದೀನದಿಂದ ಹೊರಟರು. ಅವರ ಜೊತೆಗೆ ಮುನ್ನೂರಕ್ಕೂ ಸ್ವಲ್ಪ ಮೇಲ್ಪಟ್ಟು ಸಹಾಬಿಯರು ಇದ್ದರು. ಹೆಚ್ಚಿನ ವರದಿಗಳಲ್ಲಿ ಮುಸ್ಲಿಮರ ಸಂಖ್ಯೆ 313 ಎಂದು ಬಂದಿದೆ. ಅವರಲ್ಲಿ 74 ಮುಹಾಜಿರರು ಇದ್ದರು. ಉಳಿದವರು ಅನ್ಸಾರ್ ಸಹಾಬಿಗಳಾಗಿದ್ದರು. ಇದು ಅನ್ಸಾರ್ ಸಹಾಬಿಯರು ಕೂಡ ಪಾಲ್ಗೊಂಡ ಮೊದಲ ಯುದ್ಧವಾಗಿತ್ತು. ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ)ರೊಡನೆ ಮದೀನದಲ್ಲಿ ಇರಲು ಹಝ್ರತ್ ಪೈಗಂಬರ್(ಸ) ಆಜ್ಞಾಪಿಸಿದರು. ಏಕೆಂದರೆ, ಅವರ ಪತ್ನಿ ಹಝ್ರತ್ ರುಖಿಯ ಬಿನ್ತ್ ರಸೂಲುಲ್ಲಾಹ್(ಸ) ರೋಗಿಯಾಗಿದ್ದರು.

ಹಝ್ರತ್ ಪೈಗಂಬರ್(ಸ) ಯುದ್ಧಕ್ಕಾಗಿ ಹೊರಡುವಾಗ ಉಮ್ಮೇ ವರ್‌ಖ ಬಿನ್ತ್ ನೌಫಲ್ ಎಂಬ ಓರ್ವ ಮಹಿಳೆ ಹೀಗೆ ಹೇಳಿದರು: ನನಗೂ ಯುದ್ಧಕ್ಕಾಗಿ ಹೋಗಲು ಅನುಮತಿ ನೀಡಿರಿ. ನಾನು ನಿಮ್ಮೊಡನೆ ರೋಗಿಗಳ ಶುಶ್ರೂಷೆ ಮಾಡುವೆ. ಬಹುಶಃ ಅಲ್ಲಾಹನು ನನಗೂ ಶಹಾದತ್ ಸ್ಥಾನ ನೀಡುವನು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ನಿಮ್ಮ ಮನೆಯಲ್ಲೇ ಇರಿ. ಅಲ್ಲಾಹನು ನಿಮಗೆ ಶಹಾದತ್ ಪದವಿ ನೀಡುವನು. ನಂತರ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಉಮ್ಮೇ ವರ್‌ಖರನ್ನು ಅವರ ಗುಲಾಮ ಮತ್ತು ದಾಸಿ ವಧಿಸಿದರು. ಹೀಗೆ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಅವರಿಗೆ ಶಹಾದತ್ ಲಭಿಸಿತು.

ಈ ಯುದ್ಧದಲ್ಲಿ ಮುಸ್ಲಿಮರ ಬಳಿ ಐದು ಅಥವಾ ಕೆಲವು ವರದಿಗಳ ಪ್ರಕಾರ ಎರಡು ಕುದುರೆಗಳು, 60 ಯುದ್ಧ ಉಡುಪುಗಳು, ಎಪ್ಪತ್ತು ಅಥವಾ ಎಂಬತ್ತು ಒಂಟೆಗಳು ಇದ್ದುವು. ಶ್ರೇಷ್ಠ ಸಹಾಬಿಯರಿಗಾಗಿ ಹಝ್ರತ್ ಪೈಗಂಬರ್(ಸ) ಹೀಗೆ ಪ್ರಾರ್ಥಿಸಿದರು: ಹೇ ಅಲ್ಲಾಹ್, ಇವರು ಬರಿಗಾಲಲ್ಲಿ ಇರುವವರು, ಇವರಿಗೆ ಸವಾರಿಗಳನ್ನು ನೀಡು. ಇವರು ಬರೀ ಮೈಯಲ್ಲಿ ಇರುವವರು, ಇವರಿಗೆ ಉಡಿಗೆಗಳನ್ನು ನೀಡು. ಇವರು ಹಸಿದಿರುವವರು, ಇವರ ಹಸಿವನ್ನು ನೀಗಿಸು. ಇವರು ಬಡವರು, ಇವರನ್ನು ನಿನ್ನ ಕೃಪೆಯಿಂದ ಧನಿಕರನ್ನಾಗಿ ಮಾಡು. ಹೀಗೆ ಈ ದುಆ ಸ್ವೀಕಾರವಾಯಿತು. ಯುದ್ಧ ಕೊನೆಗೊಳ್ಳುವಾಗ ಸವಾರಿ ಲಭಿಸದ ಯಾವನೇ ವ್ಯಕ್ತಿ ಇರಲಿಲ್ಲ. ಧವಸ ಧಾನ್ಯಗಳು ಎಷ್ಟು ಇತ್ತು ಎಂದರೆ ಆಹಾರ ಪಾನೀಯಗಳ ಯಾವುದೇ ಕೊರತೆ ಇರಲಿಲ್ಲ. ಉಡುಪು ಇಲ್ಲದವರಿಗೆ ಉಡುಪುಗಳು ಲಭಿಸಿದುವು. ಯುದ್ಧ ಕೈದಿಗಳ ಬಿಡುಗಡೆಯಿಂದ ಎಷ್ಟು ಪ್ರತಿಫಲಧನ ಲಭಿಸಿತು ಎಂದರೆ, ಪ್ರತಿಯೊಂದು ಕುಟುಂಬ ಶ್ರೀಮಂತ ವಾಯಿತು.

ಹಝ್ರತ್ ಉಸ್ಮಾನ್(ರ) ಅಲ್ಲದೆಯೂ ಬೇರೆ ಕೆಲವು ನಿಷ್ಠಾವಂತರಿಗೂ ಹಝ್ರತ್ ಪೈಗಂಬರ್(ಸ) ಯುದ್ಧಕ್ಕೆ ಹೋಗುವ ಅನುಮತಿ ನೀಡಿರಲಿಲ್ಲ. ಅವರಲ್ಲಿ ಹಝ್ರತ್ ಅಬೂ ಉಮಾಮ ಬಿನ್ ಸಅ್‌ಲಬರ ತಾಯಿ ರೋಗಿಯಾಗಿದ್ದ ಕಾರಣ ಅವರಿಗೆ ಅನುಮತಿ ಲಭಿಸಲಿಲ್ಲ. ಹಝ್ರತ್ ಸಅದ್ ಬಿನ್ ಉಬಾದ ಎಂಬವರು ಇತರರಿಗಾಗಿ ಯುದ್ಧದ ತಯಾರಿ ಮಾಡಿಸುತ್ತಿದ್ದರು. ಅವರನ್ನು ಹಾವು ಕಚ್ಚಿತು. ಹೀಗೆ ಅವರಿಗೆ ಯುದ್ಧಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಅದೇ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ಕಿರುಪ್ರಾಯದ ಯುವಕರೊಡನೆ ಮರಳಿ ಹೋಗಲು ಆದೇಶ ನೀಡಿದರು. ಅವರಲ್ಲಿ ಉಮೈರ್ ಬಿನ್ ಅಬೀ ವಖಾಸ್(ರ) ಕೂಡ ಇದ್ದರು. ಮರಳಿ ಹೋಗಲು ನೀಡಿದ ಆದೇಶವನ್ನು ಕೇಳಿ ಅವರು ಅತ್ತುಬಿಟ್ಟರು. ಆಗ ಹಝ್ರತ್ ಪೈಗಂಬರ್(ಸ) ಅವರಿಗೆ ಅನುಮತಿ ನೀಡಿದರು. ಹೀಗೆ ಅವರು ಯುದ್ಧದಲ್ಲಿ ಭಾಗಿಯಾದರು ಮತ್ತು ಹುತಾತ್ಮರಾದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇಂದು ಎಂತಹ ಕಾಲಘಟ್ಟ ಬಂದಿದೆ ಎಂದರೆ, ಜನರು ಇಸ್ಲಾಂ ಮತ್ತು ಈಮಾನ್‌ಗಾಗಿ ತ್ಯಾಗ ಮಾಡುವುದರಿಂದ ಹಿಂದೆ ಸರಿಯಲು ಕಾರಣಗಳನ್ನು ಮತ್ತು ನೆವನಗಳನ್ನು ಹುಡುಕುತ್ತಾರೆ. ನಮಗೆ ಇಂತಿಂತಹ ತೊಂದರೆ ಮತ್ತು ತಡೆಗಳು ಇವೆ ಎಂದು ತ್ಯಾಗ ಮಾಡಬೇಕಾದ ಸಮಯ ಬರುವಾಗ ಹೇಳುತ್ತಾರೆ. ಆದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಶಕ್ತಿಯ ಸ್ವಾಧೀನದಿಂದ ಮುಸ್ಲಿಮರಲ್ಲಿ ತ್ಯಾಗದ ಎಂತಹ ಆವೇಶ ಉಂಟಾಗಿತ್ತು ಎಂದರೆ, ಪುರುಷ ಮತ್ತು ಮಹಿಳೆಯರ ಮಾತು ಬಿಡಿ, ಮಕ್ಕಳಲ್ಲಿ ಕೂಡ ಈ ಆವೇಶ ತುಂಬಿರುವುದನ್ನು ಕಾಣಬಹುದಾಗಿತ್ತು.

ಈ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ) ಅಬ್ದುಲ್ಲಾಹ್ ಬಿನ್ ಉಮ್ಮೇ ಮಕ್ತೂಮ್‌ರನ್ನು ಮದೀನದ ಅಮೀರನ್ನಾಗಿ ನೇಮಿಸಿದರು. ಆದರೆ ಅಬ್ದುಲ್ಲಾಹ್ ಕಣ್ಣು ಕಾಣದ ವ್ಯಕ್ತಿಯಾಗಿರುವರು ಮತ್ತು ಮದೀನದ ಆಡಳಿತ ಸುದೃಢವಾಗಿರಬೇಕು ಎಂಬ ಯೋಚನೆ ಹಝ್ರತ್ ಪೈಗಂಬರ್(ಸ)ರಿಗೆ ಮಾರ್ಗ ಮಧ್ಯೆ ಉಂಟಾಯಿತು. ಹೀಗೆ ಹಝ್ರತ್ ಪೈಗಂಬರ್(ಸ) ಅಬೂಲುಬಾಬ ಬಿನ್ ಮುಂಧಿರ್(ರ)ರನ್ನು ಮದೀನದ ಅಮೀರನ್ನಾಗಿ ಮಾಡಿಕೊಂಡು ಮರಳಿ ಕಳುಹಿಸಿದರು. ಅದೇ ರೀತಿಯಲ್ಲಿ ಆಸಿಂ ಬಿನ್ ಅದ್ದಿ(ರ)ರನ್ನು ಖುಬಾದ ಅಮೀರನ್ನಾಗಿ ಮಾಡಿದರು. ಹಝ್ರತ್ ಪೈಗಂಬರ್(ಸ) ಇಸ್ಲಾಮಿನ ಸೈನ್ಯದ ಧ್ವಜವನ್ನು ಮುಸ್‌ಅಬ್ ಬಿನ್ ಉಮೈರ್(ರ)ರಿಗೆ ದಯಪಾಲಿಸಿದರು. ಈ ಧ್ವಜ ಬಿಳಿ ಬಣ್ಣದ್ದಾಗಿತ್ತು. ಇದಲ್ಲದೇ ಎರಡು ಕಪ್ಪು ಧ್ವಜಗಳು ಕೂಡ ಇದ್ದುವು. ಅದರಲ್ಲಿ ಒಂದು ಹಝ್ರತ್ ಅಲಿ(ರ)ರ ಬಳಿಯಲ್ಲಿತ್ತು. ಈ ಬಾವುಟವನ್ನು ಹಝ್ರತ್ ಆಯಿಶ(ರ)ರ ಹೊದಿಕೆಯಿಂದ ತಯಾರಿಸಲಾಗಿತ್ತು. ಮತ್ತೊಂದು ಕಪ್ಪು ಬಾವುಟ ಒಬ್ಬ ಅನ್ಸಾರಿ ಸಹಾಬಿಯರ ಬಳಿಯಲ್ಲಿತ್ತು. ಒಂದು ವರದಿಯ ಪ್ರಕಾರ ಇಸ್ಲಾಮಿನ ಸೈನ್ಯದಲ್ಲಿ ಮೂರು

ಧ್ವಜಗಳಿದ್ದುವು. ಮುಹಾಜಿರರ ಧ್ವಜ ಹಝ್ರತ್ ಮುಸ್‌ಅಬ್ ಬಿನ್ ಉಮೈರ್[(ರ)]ರ ಬಳಿ, ಖಝ್ರಜ್ ಗೋತ್ರದ ಧ್ವಜ ಹಝ್ರತ್ ಹಬ್ಬಾಬ್ ಬಿನ್ ಮುಂಧಿರ್[(ರ)]ರ ಬಳಿ, ಔಸ್ ಗೋತ್ರದ ಧ್ವಜ ಹಝ್ರತ್ ಸಅದ್ ಬಿನ್ ಮುಆಧ್[(ರ)]ರ ಬಳಿಯಲ್ಲಿತ್ತು.

(ಈ ವಿವರಣೆ ಮುಂದುರೆಯವುದು ಎಂದು ಹೇಳಿದ ನಂತರ ಹುಝೂರ್ ನಾಲ್ವರು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ ಗ್ವಾಯಿಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis****(atba)*
*At, **'Masjid Mubarak',** Islamabad, Tilford, UK. On 16-06-2023*
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
***Email****:* *khutuba.kannada@gmail.com*
**You can find all the Sermons archived at**: www.alislam.org/friday-sermon